ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1410 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 22-08-2025 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ, ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ) ರಾಜ್ಯದಲ್ಲಿ ಮಹಿಳಾ ಸಬಲೀಕರಣ ಮತ್ತು ಸ್ವಾಭಿಮಾನವನ್ನು ಉತ್ತೇಜಿಸುವ ಉದ್ದೇಶದಿಂದ ಸ್ಥಾಪಿತವಾಗಿರುವ ಅಕ್ಕ ಕ್ಯಾಂಟೀನ್ ಮತ್ತು ಅಕ್ಕ ಕೆಫೆ ಯೋಜನೆಗಳ ಅಡಿಯಲ್ಲಿ ರಾಜ್ಯಾದ್ಯಂತ ಈಗಾಗಲೇ ಎಷ್ಟು ಘಟಕಗಳನ್ನು ಸ್ಥಾಪಿಸಲಾಗಿದೆ; (ಘಟಕವಾರು ಅಥವಾ ತಾಲ್ಲೂಕುವಾರು ಮಾಹಿತಿ ನೀಡುವುದು) | <u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u><br><u>ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM)</u><br>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ದೀನ್ ದಯಾಳ್ ಜನ್ ಆಜೀವಿಕ ಯೋಜನೆಯಡಿ-ಶಹರಿ (ಪ್ರಾಯೋಗಿಕ) ಮಹಿಳಾ ಸ್ವ-ಸಹಾಯ ಗುಂಪುಗಳಿಂದ ಇಲ್ಲಿಯವರೆಗೂ 04 ಅಕ್ಕ ಕೆಫೆಗಳನ್ನು ಈ ಕೆಳಕಂಡ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿದೆ. |

| ಕ್ರ. ಸಂ | ನಗರ ಸ್ಥಳೀಯ ಸಂಸ್ಥೆ | ವಿಳಾಸ |
|---|---|---|
| 1 | ಬಿಬಿಎಂಪಿ ಪಶ್ಚಿಮ ವಲಯ | ಆಯುಕ್ತರ ಕಚೇರಿ, ಪಂಚಾಯತ್ ರಾಜ್ ಇಲಾಖಾ ಕಟ್ಟಡ ಆವರಣ, ಕೆಂಪೇಗೌಡ ರಸ್ತೆ |
| 2 | | ವ್ಯವಸ್ಥಾಪಕ, ನಿರ್ದೇಶಕರ ಕಚೇರಿ, ಜಿಟಿಟಿಸಿ ಕಾಲೇಜು ಕಟ್ಟಡ ಆವರಣ, ರಾಜಾಜಿನಗರ ಇಂಡಸ್ಟ್ರೀಯಲ್ ಟೌನ್ |
| 3 | ತುಮಕೂರು ಮಹಾನಗರ ಪಾಲಿಕೆ | ಆಯುಕ್ತರ ಕಚೇರಿ, ಮಹಾನಗರ ಪಾಲಿಕೆ, ತುಮಕೂರು ಕಚೇರಿ ಆವರಣ |
| 4 | ಹುಬ್ಬಳ್ಳಿ-ಧಾರವಾಡ, ಮಹಾನಗರ ಪಾಲಿಕೆ | ಧಾರವಾಡ ಜಿಲ್ಲಾ ಆಸ್ಪತ್ರೆ ಆವರಣ |

<u>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ/ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)</u>

- ರಾಜ್ಯದಲ್ಲಿ ಮಹಿಳಾ ಸಬಲೀಕರಣ ಮತ್ತು ಸ್ವಾಭಿಮಾನವನ್ನು ಉತ್ತೇಜಿಸುವ ಉದ್ದೇಶದಿಂದ ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ ಅನುಷ್ಠಾನಗೊಳಿಸಲಾಗುತ್ತಿರುವ "ಅಕ್ಕ ಕೆಫೆ"-ಒಲವಿನ ಊಟ ಯೋಜನೆಯಡಿಯಲ್ಲಿ 16 ಅಕ್ಕ ಕೆಫೆ ಹಾಗೂ 1 ಅಕ್ಕ ಫುಡ್ ಟ್ರಕ್ ಕಾರ್ಯನಿರ್ವಹಿಸುತ್ತಿವೆ. 11 ಅಕ್ಕ ಕೆಫೆಗಳ ನವೀಕರಣ ಪ್ರಕ್ರಿಯೆ ಪೂರ್ಣಗೊಂಡಿದ್ದು, ಉದ್ಘಾಟನೆಗೆ ಸಿದ್ಧವಾಗಿರುತ್ತವೆ.
- ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಕ್ಕ ಕೆಫೆಗಳ ವಿವರವನ್ನು **ಅನುಬಂಧ-1ರಲ್ಲಿ** ಹಾಗೂ ಉದ್ಘಾಟನೆಗೆ ಸಿದ್ಧಗೊಂಡಿರುವ ಅಕ್ಕ ಕೆಫೆ ಘಟಕಗಳ ವಿವರವನ್ನು **ಅನುಬಂಧ-2** ರಲ್ಲಿ ನೀಡಿದೆ.

<table>
<tr>
<td>ಆ) ಈ ಯೋಜನೆಗಳ ಪರಿಣಾಮವಾಗಿ ಮಹಿಳೆಯರಿಗೆ ಎಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗಿದೆ; (ತಾಲ್ಲೂಕುವಾರು ಅಥವಾ ಜಿಲ್ಲಾವಾರು ಮಾಹಿತಿ ನೀಡುವುದು)</td>
<td>
<u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u><br>
<u>ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ</u><br>
<u>(DAY-NULM)</u><br><br>
ಅಕ್ಕ ಕೆಫೆ ಯೋಜನೆಯಿಂದ ಇಲ್ಲಿಯವರೆಗೆ ಒಟ್ಟು 36 ಮಹಿಳೆಯರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ನಗರ ಸ್ಥಳೀಯ ಸಂಸ್ಥೆ</th><th>ವಿಳಾಸ</th><th>ಉದ್ಯೋಗ ಕಲ್ಪಿಸಲಾದ ಮಹಿಳೆಯರ ಸಂಖ್ಯೆ</th></tr>
<tr><td>1</td><td rowspan="2">ಬಿಬಿಎಂಪಿ ಪಶ್ಚಿಮ ವಲಯ</td><td>ಆಯುಕ್ತರ ಕಚೇರಿ, ಪಂಚಾಯತ್ ರಾಜ್ ಇಲಾಖಾ ಕಟ್ಟಡ ಆವರಣ, ಕೆಂಪೇಗೌಡ ರಸ್ತೆ</td><td>06</td></tr>
<tr><td>2</td><td>ವ್ಯವಸ್ಥಾಪಕ, ನಿರ್ದೇಶಕರ ಕಚೇರಿ, ಜಿಟಿಟಿಸಿ ಕಾಲೇಜು ಕಟ್ಟಡ ಆವರಣ, ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್</td><td>10</td></tr>
<tr><td>3</td><td>ತುಮಕೂರು ಮಹಾನಗರ ಪಾಲಿಕೆ</td><td>ಆಯುಕ್ತರ ಕಚೇರಿ, ಮಹಾನಗರ ಪಾಲಿಕೆ, ತುಮಕೂರು ಕಚೇರಿ ಆವರಣ</td><td>10</td></tr>
<tr><td>4</td><td>ಹುಬ್ಬಳ್ಳಿ-ಧಾರವಾಡ, ಮಹಾನಗರ ಪಾಲಿಕೆ</td><td>ಧಾರವಾಡ ಜಿಲ್ಲಾ ಆಸ್ಪತ್ರೆ ಆವರಣ</td><td>10</td></tr>
<tr><td></td><td>ಒಟ್ಟು</td><td></td><td>36</td></tr>
</table>
<u>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ/ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)</u><br><br>
• ಅಕ್ಕ ಕೆಫೆ ಘಟಕಗಳನ್ನು ಗ್ರಾಮ ಪಂಚಾಯತಿ ಒಕ್ಕೂಟದ ಮೂಲಕ ಗುಂಪು ಚಟುವಟಿಕೆಯಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅಕ್ಕ ಕೆಫೆಗಳಡಿ 123 ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ಉದ್ಯೋಗಾವಕಾಶ ದೊರಕಿದೆ.<br>
• ಅಕ್ಕ ಕೆಫೆ ಘಟಕಗಳಲ್ಲಿ ಉದ್ಯೋಗ ಹೊಂದಿರುವ ಸ್ವ-ಸಹಾಯ ಗುಂಪಿನ ಮಹಿಳೆಯರ ಜಿಲ್ಲಾವಾರು ವಿವರಗಳನ್ನು ಅನುಬಂಧ-3 ರಲ್ಲಿ ನೀಡಿದೆ.
</td>
</tr>
<tr>
<td>ಇ) ಈ ಯೋಜನೆಯ ಅನುಷ್ಠಾನದಲ್ಲಿ ಏನಾದರೂ ವಿಳಂಬ ಅಥವಾ ಅಡಚಣೆಗಳು ಉಂಟಾಗಿದೆಯೇ, ಇದ್ದರೆ ಅವುಗಳ ನಿವಾರಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;</td>
<td>
<u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u><br>
<u>ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ</u><br>
<u>(DAY-NULM)</u><br><br>
ದೀನದಯಾಳ್ ಜನ್ ಆಜೀವಿಕ (ಶಹರಿ) ಯೋಜನೆಗೆ ಅನ್ವಯಿಸುವುದಿಲ್ಲ.<br><br>
<u>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ/ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)</u><br><br>
• ಕೆಲವು ಜಿಲ್ಲೆಗಳಲ್ಲಿ ಅಕ್ಕಕೆಫೆಗಳನ್ನು ಹೆಚ್ಚು ಜನಸಂದಣಿ ಪ್ರದೇಶಗಳಲ್ಲಿ ಸ್ಥಾಪಿಸಲು ಸರ್ಕಾರಿ ಕಟ್ಟಡಗಳನ್ನು ಗುರುತಿಸುವಲ್ಲಿ, ಅನುಮತಿ ನೀಡುವಲ್ಲಿ ಹಾಗೂ ಅಕ್ಕ ಕೆಫೆಗಳಿಗೆ ಗುರುತಿಸಲಾದ ಕಟ್ಟಡಗಳ ನವೀಕರಣ ಮತ್ತು ಮೂಲಸೌಕರ್ಯ ವ್ಯವಸ್ಥೆಯಲ್ಲಿ ವಿಳಂಬವಾಗಿರುತ್ತದೆ.<br>
• ಜಿಲ್ಲೆಗಳೊಂದಿಗೆ ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ಕೈಗೊಂಡು ಪ್ರಗತಿಗೆ ಕ್ರಮವಹಿಸಲಾಗುತ್ತಿದೆ. ಮುಂದುವರೆದು, ಸರ್ಕಾರದ ಅಪರ ಮುಖ್ಯ
</td>
</tr>
</table>

| | |
|---|---|
| | ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಸಭೆ ನಡೆಸಿ ಪ್ರಗತಿಗೆ ಸೂಕ್ತ ನಿರ್ದೇಶನಗಳನ್ನು ಒದಗಿಸಲಾಗಿರುತ್ತದೆ.<br>• ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಸದರಿ ವಿಷಯವನ್ನು ಅಳವಡಿಸಿ ಪ್ರಗತಿ ಪರಿಶೀಲನೆ ಕೈಗೊಳ್ಳಲಾಗಿದೆ.<br>• ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ಅಕ್ಕ ಕೆಫೆ ಘಟಕಗಳ ಸ್ಥಾಪನೆಗೆ 2024-25ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ಗಳಿಗೆ SNA-SPARSH ತಂತ್ರಾಂಶದ ಮೂಲಕ ಅನುದಾನ ಬಿಡುಗಡೆಗೊಳಿಸಲಾಗಿತ್ತು. 31 ಮಾರ್ಚ್, 2025ರ ಆರ್ಥಿಕ ವರ್ಷ ಪೂರ್ಣಗೊಂಡಿದ್ದರಿಂದ 16 ಅಕ್ಕ ಕೆಫೆ ಘಟಕಗಳಿಗೆ ಒದಗಿಸಿದ ಅನುದಾನ ಮರಳಿ SNA-SPARSH ಖಾತೆಗೆ ಹಿಂದಿರುಗಿರುತ್ತದೆ. ಸದರಿ ಜಿಲ್ಲೆಗಳಿಗೆ ರೂ.139.00 ಲಕ್ಷಗಳ ಅನುದಾನವನ್ನು ದಿನಾಂಕ: 04.07.2025ರಂದು ಮರು ಬಿಡುಗಡೆಗೊಳಿಸಿ ಅನುಷ್ಠಾನಕ್ಕೆ ಕ್ರಮವಹಿಸಲಾಗಿದೆ. |
| ಈ) ಅಕ್ಕ ಕ್ಯಾಂಟೀನ್ ಯೋಜನೆಯ ಅಡಿಯಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳು ಅಥವಾ ಮಹಿಳಾ ಒಕ್ಕೂಟಗಳ ಪಾತ್ರವನ್ನು ಸರ್ಕಾರ ಹೇಗೆ ಬಳಸಿಕೊಂಡಿದೆ; (ಸಂಪೂರ್ಣ ವಿವರ ನೀಡುವುದು) | ರಾಷ್ಟ್ರೀಯ ಜೀವನೋಪಾಯ ಅಭಿಯಾನ<br>ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM)<br>'ಅಕ್ಕ ಕೆಫೆ' ಕಾರ್ಯಕ್ರಮವು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಈ ಕಾರ್ಯಾಕ್ರಮದ ಮುಖ್ಯ ಉದ್ದೇಶವು, ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಆಹಾರ ಪೂರೈಕೆ ಕ್ಷೇತ್ರದಲ್ಲಿ ಸುಸ್ಥಿರ ಜೀವನೋಪಾಯ ಚಟುವಟಿಕೆಯನ್ನು ಒದಗಿಸುವುದಾಗಿದೆ.<br>ಪ್ರಮುಖವಾಗಿ ಉತ್ತಮ ಗುಣಮಟ್ಟದ ಶುಚಿ, ರುಚಿ, ಪೌಷ್ಠಿಕ ಆಹಾರವನ್ನು ಸಾರ್ವಜನಿಕರಿಗೆ ಕೈಗೆಟಕುವ ದರದಲ್ಲಿ ಪೂರೈಸುವ ದೂರ ದೃಷ್ಟಿಯೊಂದಿಗೆ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದ, ಮಹಿಳೆಯರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಅಭಿವೃದ್ಧಿ ಪಥದೊಂದಿಗೆ ಸ್ವಾವಲಂಬನೆ ಜೀವನ ನಿರ್ವಹಿಸುವಲ್ಲಿ ನಿರಂತರವಾಗಿ ಬೆಂಬಲ ನೀಡುವುದಾಗಿದೆ.<br>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ/ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)<br>ಅಕ್ಕ ಕೆಫೆ ಕಾರ್ಯಕ್ರಮವು ಕೌಶಲ್ಯಾಭಿವೃದ್ಧಿ. ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು. ಕಾರ್ಯಕ್ರಮದ ಮುಖ್ಯ ಉದ್ದೇಶವು ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಆಹಾರ ಪೂರೈಕೆ ಕ್ಷೇತ್ರದಲ್ಲಿ ಸುಸ್ಥಿರ ಜೀವನೋಪಾಯ ಉದ್ಯೋಗಗಳನ್ನು ಒದಗಿಸುವುದಾಗಿದ್ದು, ಸದರಿ ಚಟುವಟಿಕೆಯನ್ನು ಗ್ರಾಮ ಪಂಚಾಯತಿ/ ನಗರ ಮಟ್ಟದ ಒಕ್ಕೂಟಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕುರಿತು (KSRLPS/LH-NF/48/2024-25) ದಿನಾಂಕ: 07-10-2024 ರಂದು ಸುತ್ತೋಲೆ ಹೊರಡಿಸಲಾಗಿದೆ.<br>**ಸದರಿ ಒಕ್ಕೂಟಗಳ ಪಾತ್ರ ಈ ಕೆಳಗಿನಂತಿದೆ.**<br>• ಪ್ರಮುಖವಾಗಿ ಅಕ್ಕ ಕೆಫೆಯ ನಿರ್ವಹಣೆಗೆ ಅರ್ಹ ಸ್ವ-ಸಹಾಯ ಮಹಿಳೆಯರ ಆಯ್ಕೆಯನ್ನು ಜಿಪಿಎಲ್‌ಎಫ್ ಮುಖಾಂತರ ಕೈಗೊಳ್ಳಲಾಗುತ್ತಿದೆ.<br>• ಗ್ರಾಮ ಪಂಚಾಯತಿ/ ನಗರ ಮಟ್ಟದ ಒಕ್ಕೂಟಗಳು ಅಕ್ಕ ಕೆಫೆಗೆ ಗುರುತಿಸಲಾದ ಸ್ಥಳದ ಮಾಲೀಕತ್ವ ಹೊಂದಿರುವ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುತ್ತವೆ. |

| | |
|---|---|
| | • ಗ್ರಾಮ ಪಂಚಾಯತಿ/ನಗರ ಮಟ್ಟದ ಒಕ್ಕೂಟದ ಪದಾಧಿಕಾರಿಗಳು ಕಾಲಕಾಲಕ್ಕೆ ಅಕ್ಕ ಕೆಫೆಗೆ ಭೇಟಿ ನೀಡಿ ಕಾರ್ಯವೈಖರಿಯ ಕುರಿತು ಮೇಲ್ವಿಚಾರಣೆಯನ್ನು ಕೈಗೊಂಡು ಉತ್ತಮ ನಿರ್ವಹಣೆ ಮತ್ತು ಶ್ರೇಣೀಕರಣ ಪ್ರಕ್ರಿಯೆಗಳಿಗೆ ಅವಶ್ಯಕ ಮಾರ್ಗದರ್ಶನ ಮತ್ತು ಬೆಂಬಲವನ್ನು ಒದಗಿಸುತ್ತಿದ್ದಾರೆ.<br>• ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯಲ್ಲಿ ಅಕ್ಕ ಕೆಫೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿ ರಚಿಸಲಾಗಿರುವ ಜಿಲ್ಲಾ ಸಮಿತಿಯಲ್ಲಿ ಒಬ್ಬರು ತಾಲ್ಲೂಕು ಮಟ್ಟದ ಒಕ್ಕೂಟ ಸದಸ್ಯರು, ಒಬ್ಬರು ಅಕ್ಕಕೆಫೆ ನಿರ್ವಹಿಸುವ ಸ್ವಸಹಾಯ ಗುಂಪಿನ ಮಹಿಳೆಯನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. |

ಸಂಖ್ಯೆ: ಕೌಉಜೀಇ 24 ಕೌಗುಪ್ರ 2025

(ಡಾ. ಶರಣ ಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು

## ಅನುಬಂಧ-1

## ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಕ್ಕಕೆಫೆ ಘಟಕಗಳ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಸ್ಥಳ |
|---|---|---|---|
| 1 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | ತಾಲ್ಲೂಕು ಪಂಚಾಯತ್ ಆವರಣ |
| 2 | ಬೆಳಗಾವಿ | ಬೆಳಗಾವಿ | ಜಿಲ್ಲಾ ಪಂಚಾಯತ್ ಆವರಣ |
| 3 | ಹಾವೇರಿ | ಹಾವೇರಿ | ಜಿಲ್ಲಾ ಪಂಚಾಯತ್ ಆವರಣ |
| 4 | ದಾವಣಗೆರೆ | ದಾವಣಗೆರೆ | ಜಿಲ್ಲಾ ಪಂಚಾಯತ್ ಆವರಣ |
| 5 | ಬಾಗಲಕೋಟೆ | ಮುಧೋಳ | ತಾಲ್ಲೂಕು ಪಂಚಾಯತ್ ಆವರಣ |
| 6 | ಕಲಬುರಗಿ | ಕಲಬುರಗಿ | ತಾಲ್ಲೂಕು ಪಂಚಾಯತ್ ಆವರಣ |
| 7 | ದಾವಣಗೆರೆ | ಹರಿಹರ | ಯುವಜನ ಸೇವಾ ಕ್ರೀಡಾ ಇಲಾಖೆ ಕಛೇರಿ ಆವರಣ |
| 8 | ಯಾದಗಿರಿ | ಯಾದಗಿರಿ | ಜಿಲ್ಲಾ ಪಂಚಾಯತ್ ಆವರಣ |
| 9 | ಬಾಗಲಕೋಟೆ | ಜಮಖಂಡಿ | ತಾಲ್ಲೂಕು ಪಂಚಾಯತ್ ಆವರಣ |
| 10 | ಬೆಂಗಳೂರು ನಗರ | ಬೆಂಗಳೂರು ದಕ್ಷಿಣ | ಜಿಲ್ಲಾ ಪಂಚಾಯತ್ ಆವರಣ |
| 11 | ದಕ್ಷಿಣ ಕನ್ನಡ | ಬೆಳ್ತಂಗಡಿ | ಉಜಿರೆ SDM ಆಸ್ಪತ್ರೆ ಹತ್ತಿರ |
| 12 | ಉತ್ತರ ಕನ್ನಡ | ಕಾರವಾರ | ತಹಶೀಲ್ದಾರ್ ಕಛೇರಿ ಆವರಣ |
| 13 | ರಾಯಚೂರು | ಲಿಂಗಸುಗೂರು | ತಾಲ್ಲೂಕು ಪಂಚಾಯತ್ ಆವರಣ |
| 14 | ಚಿತ್ರದುರ್ಗ | ಚಿತ್ರದುರ್ಗ | ಜಿಲ್ಲಾ ಪಂಚಾಯತ್ ಆವರಣ |
| 15 | ಉಡುಪಿ | ಉಡುಪಿ | ಜಿಲ್ಲಾಧಿಕಾರಿಗಳ ಕಛೇರಿ ಆವರಣ |
| 16 | ವಿಜಯನಗರ | ಹೊಸಪೇಟೆ | ಜಿಲ್ಲಾ ಪಂಚಾಯತ್ ಆವರಣ |
| **ಅಕ್ಕ ಫುಡ್ ಟ್ರಕ್ ಘಟಕದ ವಿವರ** | | | |
| 1 | ವಿಜಯನಗರ | ಹೊಸಪೇಟೆ | ಹಂಪಿ ವಿಜಯವಿಠಲ ದೇವಸ್ಥಾನ |

(ಪದ್ಮ.ಎಸ್)
ಸರ್ಕಾರದ ಅಧೀನಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

## ಅನುಬಂಧ-2

| ರಾಜ್ಯದಲ್ಲಿ ಉದ್ಘಾಟನೆಗೆ ಸಿದ್ಧವಾಗಿರುವ ಅಕ್ಕ ಕೆಫೆ ವಿವರ | | | |
|---|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಸ್ಥಳ |
| 1 | ಉತ್ತರ ಕನ್ನಡ | ಮುರುಡೇಶ್ವರ | ಮುರುಡೇಶ್ವರ ಹತ್ತಿರ ವಾಣಿಜ್ಯ ಸಂಕೀರ್ಣ |
| 2 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | ಚಿಕ್ಕಬಲಾಪುರ ಜಿಲ್ಲಾ ಪಂಚಾಯತ್ ಆವರಣ |
| 3 | ಶಿವಮೊಗ್ಗ | ಶಿಕಾರಿಪುರ | ತಾಲೂಕು ಪಂಚಾಯತ್ ಆವರಣ |
| 4 | ಶಿವಮೊಗ್ಗ | ಸೊರಬ್ | ಬಸ್ ನಿಲ್ದಾಣ |
| 5 | ಬೀದರ್ | ಬೀದರ್ | ಬೀದರ್ ಜಿಲ್ಲಾ ಪಂಚಾಯತ್ ಆವರಣ |
| 6 | ಬೀದರ್ | ಹುಮನಾಬಾದ್ | ಹುಮನಾಬಾದ್ ತಾಲೂಕು ಪಂಚಾಯತ್ ಆವರಣ |
| 7 | ಕೊಪ್ಪಳ | ಕೊಪ್ಪಳ | ಕೊಪ್ಪಳ ತಹಸೀಲ್ದಾರ್ ಕಛೇರಿ |
| 8 | ಧಾರವಾಡ | ಧಾರವಾಡ | ಜಿಲ್ಲಾ ಪಂಚಾಯತ್ ಹತ್ತಿರ |
| 9 | ಧಾರವಾಡ | ಕಲಗಟಗಿ | ಕಲಗಟಗಿ ತಾಲೂಕು ಸಂಕೀರ್ಣ |
| 10 | ಬೆಂಗಳೂರು ನಗರ | ಹುಸ್ಕೂರು | ಹುಸ್ಕೂರು ಜಿ.ಪಿ ಆವರಣ |
| 11 | ಮೈಸೂರು | ಮೈಸೂರು | ಮೈಸೂರು ಜಿಲ್ಲಾ ಪಂಚಾಯತ್ ಆವರಣ |

Padma. S
(ಪದ್ಮ.ಎಸ್)
ಸರ್ಕಾರದ ಅಧೀನಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಅನುಬಂಧ-3

| ಅಕ್ಕ ಕೆಫೆ ಘಟಕಗಳಲ್ಲಿ ಉದ್ಯೋಗ ಹೊಂದಿರುವ ಸ್ವ-ಸಹಾಯ ಗುಂಪಿನ ಮಹಿಳೆಯರ ಜಿಲ್ಲಾವಾರು ವಿವರ. | | | | |
|---|---|---|---|---|
| ಕ್ರ. ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಸ್ಥಳ | ಉದ್ಯೋಗ ನಿರ್ವಹಿಸುತ್ತಿರುವ ಮಹಿಳೆಯರ ಸಂಖ್ಯೆ |
| 1 | ಬೆಂಗಳೂರು ಗ್ರಾ | ದೇವನಹಳ್ಳಿ | ತಾಲ್ಲೂಕು ಪಂಚಾಯತ್ ಆವರಣ | 6 |
| 2 | ಬೆಳಗಾವಿ | ಬೆಳಗಾವಿ | ಜಿಲ್ಲಾ ಪಂಚಾಯತ್ ಆವರಣ | 10 |
| 3 | ಹಾವೇರಿ | ಹಾವೇರಿ | ಜಿಲ್ಲಾ ಪಂಚಾಯತ್ ಆವರಣ | 15 |
| 4 | ದಾವಣಗೆರೆ | ದಾವಣಗೆರೆ | ಜಿಲ್ಲಾ ಪಂಚಾಯತ್ ಆವರಣ | 7 |
| 5 | ಬಾಗಲಕೋಟೆ | ಮುಧೋಳ | ತಾಲ್ಲೂಕು ಪಂಚಾಯತ್ ಆವರಣ | 5 |
| 6 | ಕಲಬುರಗಿ | ಕಲಬುರಗಿ | ತಾಲ್ಲೂಕು ಪಂಚಾಯತ್ ಆವರಣ | 6 |
| 7 | ದಾವಣಗೆರೆ | ಹರಿಹರ | ಯುವಜನ ಸೇವಾ ಕ್ರೀಡಾ ಇಲಾಖೆ ಕಛೇರಿ ಆವರಣ | 5 |
| 8 | ಯಾದಗಿರಿ | ಯಾದಗಿರಿ | ಜಿಲ್ಲಾ ಪಂಚಾಯತ್ ಆವರಣ | 8 |
| 9 | ಬಾಗಲಕೋಟೆ | ಜಮಖಂಡಿ | ತಾಲ್ಲೂಕು ಪಂಚಾಯತ್ ಆವರಣ | 5 |
| 10 | ಬೆಂಗಳೂರು ನಗರ | ಬೆಂಗಳೂರು ದಕ್ಷಿಣ | ಜಿಲ್ಲಾ ಪಂಚಾಯತ್ ಆವರಣ | 10 |
| 11 | ದಕ್ಷಿಣ ಕನ್ನಡ | ಬೆಳ್ತಂಗಡಿ | ಉಜಿರೆ SDM ಆಸ್ಪತ್ರೆ ಹತ್ತಿರ | 5 |
| 12 | ಉತ್ತರ ಕನ್ನಡ | ಕಾರವಾರ | ತಹಶೀಲ್ದಾರ್ ಕಛೇರಿ ಆವರಣ | 5 |
| 13 | ರಾಯಚೂರು | ಲಿಂಗಸುಗೂರು | ತಾಲ್ಲೂಕು ಪಂಚಾಯತ್ ಆವರಣ | 10 |
| 14 | ಚಿತ್ರದುರ್ಗ | ಚಿತ್ರದುರ್ಗ | ಜಿಲ್ಲಾ ಪಂಚಾಯತ್ ಆವರಣ | 6 |
| 15 | ಉಡುಪಿ | ಉಡುಪಿ | ಜಿಲ್ಲಾಧಿಕಾರಿಗಳ ಕಛೇರಿ ಆವರಣ | 10 |
| 16 | ವಿಜಯನಗರ | ಹೊಸಪೇಟೆ | ಜಿಲ್ಲಾ ಪಂಚಾಯತ್ ಆವರಣ | 6 |
| ಅಕ್ಕ ಫುಡ್ ಟ್ರುಕ್ ಘಟಕದಲ್ಲಿ ಉದ್ಯೋಗ ಹೊಂದಿರುವ ಸ್ವ-ಸಹಾಯ ಗುಂಪಿನ ಮಹಿಳೆಯರ ಜಿಲ್ಲಾವಾರು ವಿವರ. | | | | |
| 1 | ವಿಜಯನಗರ | ಹೊಸಪೇಟೆ | ಹಂಪಿ ವಿಜಯವಿಠಲ ದೇವಸ್ಥಾನ | 4 |
| ಒಟ್ಟು ಉದ್ಯೋಗ ಹೊಂದಿರುವ ಮಹಿಳೆಯರ ಸಂಖ್ಯೆ | | | | 123 |

Padma. S
(ಪದ್ಮ.ಎಸ್)
ಸರ್ಕಾರದ ಅಧೀನಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ